# ಸಂಸ್ಕೃತ~ಸಂಸ್ಕೃತಿ~ಸಂಸ್ಕಾರ

ಎಚ್. ಎಲ್. ಸೀತಾದೇವಿ

ಭಾರತ ದೇಶದಲ್ಲಿ ಸಂಸ್ಕೃತಿಯನ್ನು ಕಾಪಾಡಿಕೊಳ್ಳಲು ಸಂಸ್ಕೃತ ಭಾಷೆಯನ್ನು ವ್ಯಾಪಕವಾಗಿ ಕಲಿಯುವ ಅಗತ್ಯವಿದೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ನೂತನ ಶಿಕ್ಷಣ ನೀತಿ ಕುರಿತು ಚರ್ಚೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ವಿಷಯವನ್ನು ಕುರಿತ ಆಳವಾದ ಚಿಂತನೆ ಅತ್ಯಂತ ಪ್ರಸ್ತುತ. ಈ ಬಗ್ಗೆ ಬರೆದಿರುವ ಲೇಖಕಿ ಮೂಲತಃ ಸಂಸ್ಕೃತ, ಶಾಸ್ತ್ರ ಅಧ್ಯಯನ ನಡೆಸುವ ಕೌಟುಂಬಿಕ ಹಿನ್ನೆಲೆಯಿಂದ ಬಂದವರು. 'ಕನ್ನಡಪ್ರಭ' ಪತ್ರಿಕೆಯಲ್ಲಿ ಉಪಸಂಪಾದಕಿಯಾಗಿ, ಆಕಾಶವಾಣಿಯಲ್ಲಿ ವಾರ್ತಾಪ್ರಸಾರಕರಾಗಿ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯಾಸಕ್ತರೂ, ಉತ್ತಮ ಲೇಖಕಿಯೂ ಆಗಿರುವ ಇವರು ಹಲವು ಗ್ರಂಥಗಳನ್ನು ರಚಿಸಿದ್ದು, ಪ್ರಸ್ತುತ ಮೈಸೂರು ನಿವಾಸಿಗಳಾಗಿದ್ದಾರೆ.



'ಭಾಷಾಸು ಮುಖ್ಯಾ ಮಧುರಾ ದಿವ್ಯಾ ಗೀರ್ವಾಣ ಭಾರತೀ' ಎಂಬುದೊಂದು ಉಕ್ತಿ ಇದೆ. ಅಂದರೆ ಭಾಷೆಗಳಲ್ಲೆಲ್ಲ ಮುಖ್ಯವಾದದ್ದು, ಮಧುರವಾದದ್ದು, ದಿವ್ಯವಾದದ್ದು ಸಂಸ್ಕೃತ ಭಾಷೆ ಎಂದರ್ಥ. ಸಂಸ್ಕೃತ ಸರಳ, ಸುಂದರ, ಸುಲಲಿತ ಭಾಷೆ. ಅದಕ್ಕಿರುವ ಸೌಂದರ್ಯ, ಮಾಧುರ್ಯ, ಗಾಂಭೀರ್ಯಗಳನ್ನು ಬೇರೆ ಯಾವ ಭಾಷೆಯಲ್ಲೂ ಕಾಣಲು ಸಾಧ್ಯವಿಲ್ಲ. ಆದ್ದರಿಂದಲೇ ಅದನ್ನು ಸುಂದರ ಸುರಭಾಷೆ ಎನ್ನುವುದು.

ಉಚ್ಚಾರ-ಬರವಣಿಗೆಗಳೆರಡೂ ಏಕರೂಪವಾಗಿರುವ ಏಕೈಕ ಭಾಷೆ ಸಂಸ್ಕೃತ. ಕಂಪ್ಯೂಟರ್‌ಗೆ ಹೊಂದಿಸಬಹುದಾದ, ಸೂತ್ರದಷ್ಟು ಕರಾರುವಾಕ್ಕಾದ ಭಾಷೆ ಇದು. ಸಂಸ್ಕೃತಕ್ಕೂ, ಸಂಸ್ಕೃತಿಗೂ ಅವಿನಾಭಾವ ಸಂಬಂಧ. ಸಂಸ್ಕೃತವಿಲ್ಲದೆ ಸಂಸ್ಕೃತಿ ಇಲ್ಲ. ಭಾರತೀಯ ಸಂಸ್ಕೃತಿಗೆ ಸಂಸ್ಕೃತವೇ ಮೂಲ. 'ಸಂಸ್ಕೃತಿಃ ಸಂಸ್ಕೃತಾಶ್ರಿತಾ' ಎಂಬುದು ಒಂದು ಪ್ರಸಿದ್ಧ ನಾಣ್ಣುಡಿ. 'ಸಂಸ್ಕರೋತೀತಿ ಸಂಸ್ಕೃತಂ'. ನಮ್ಮ ನಡವಳಿಕೆಗಳನ್ನು ಸುಧಾರಿಸುವುದು, ಸಂಸ್ಕರಿಸುವುದು ಸಂಸ್ಕೃತ. ನಮ್ಮ ನಡೆ,ನುಡಿ, ಭಾವಗಳ ಸಮಗ್ರ ರೂಪವೇ ಸಂಸ್ಕೃತಿ. ಭಾರತೀಯ ಸಂಸ್ಕೃತಿ ಧರ್ಮ ಮೂಲವಾದದ್ದು.

ಹಿಂದೆ ಶಿಕ್ಷಣ ಕೇಂದ್ರಗಳಾಗಿದ್ದ ಗುರುಕುಲಗಳು ನಮ್ಮ ಸಂಸ್ಕೃತಿಯ ಕೇಂದ್ರಗಳೂ ಆಗಿದ್ದವು. ಬ್ರಹ್ಮಚಾರಿಯಾದವನು ಶಿಕ್ಷಣ ಪೂರೈಸಿ, ಕೇಶಾಂತ ಸಮಾವರ್ತನದ ನಂತರ ಮನೆಗೆ ತೆರಳುವಾಗ ಅವನಿಗೆ ಸಂಸ್ಕಾರಗಳ ಬಗ್ಗೆ ತಿಳಿವಳಿಕೆ ನೀಡಲಾಗುತ್ತಿತ್ತು. 'ಸತ್ಯಂ ವದ, ಧರ್ಮಂ ಚರ' ಸತ್ಯವನ್ನೇ ಹೇಳು, ಧರ್ಮ ಮಾರ್ಗಿಯಾಗಿರು — ಇತ್ಯಾದಿ ಇತ್ಯಾದಿ ಹಿತವಚನ ಹೇಳ ಲಾಗುತ್ತಿತ್ತು. ಇದನ್ನು ಸ್ನಾತಕೋಪದೇಶ ಎನ್ನಲಾಗುತ್ತಿತ್ತು. ಇದು ಕೇವಲ ಪೊಳ್ಳು ಉಪದೇಶವಾಗಿರದೆ, ಮುಂದಿನ ಜೀವನದಲ್ಲಿ ಅನುಸರಿಸಲೇಬೇಕಾದ ತತ್ತ್ವ, ಆದರ್ಶವಾಗಿತ್ತು.

ಸಂಸ್ಕೃತದಲ್ಲಿ ಸಂಸ್ಕೃತಿಗೆ ಪೂರಕವಾದ ಅಂಶಗಳು ಹೇರಳವಾಗಿವೆ. ಭಾರತದ ಧರ್ಮ-ಸಂಸ್ಕೃತಿಗಳಿಗೆ ಪಾಶ್ಚಾತ್ಯರೂ

ಮಾರುಹೋಗಿದ್ದಾರೆ. ೧೭ ನೇ ಶತಮಾನದಲ್ಲಿ ಭಾರತದ ಸುಪ್ರೀಂಕೋರ್ಟ್ ನ್ಯಾಯಾಧೀಶನಾಗಿದ್ದ ವಿಲಿಯಂ ಜೋನ್ಸ್ ಎಂಬಾತ, ''ಸಂಸ್ಕೃತ ಭಾಷೆಯ ನುಡಿಗಟ್ಟು ಅದ್ಭುತ. ಅದು ಗ್ರೀಕ್‌ಗಿಂತ ಹೆಚ್ಚು ನಿರ್ದಿಷ್ಟ. ಲ್ಯಾಟಿನ್‌ಗಿಂತ ಹೆಚ್ಚು ಪದ ಸಂಪತ್ತು ಸಂಸ್ಕೃತದಲ್ಲಿದೆ. ಅವೆರಡೂ ಭಾಷೆಗಳಿಗಿಂತ ಸಂಸ್ಕೃತ ಹೆಚ್ಚು ಪರಿಶುದ್ಧ'' ಎಂದಿದ್ದಾನೆ.

ತೀರಾ ಇತ್ತೀಚೆಗೆ ನಮ್ಮ ರಾಷ್ಟ್ರಪತಿಗಳಾಗಿದ್ದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಗ್ರೀಸ್ ದೇಶದ ಅಥೆನ್ಸ್‌ಗೆ ಹೋದಾಗ ಅಲ್ಲಿನ ರಾಷ್ಟ್ರಪತಿ ಪಪೇಲಿಯಸ್ ಅವರು, ಕಲಾಂ ಅವರನ್ನು 'ಅಧ್ಯಕ್ಷ ಮಹೋದಯ, ಭವತಾಂ ಸ್ವಾಗತಂ ಯವನ ದೇಶಂ ಪ್ರತಿ' ಎಂದು ಸಂಸ್ಕೃತದಲ್ಲಿ ಮಾತನಾಡುತ್ತಾ ಬರಮಾಡಿಕೊಂಡಿದ್ದರು. ಆಶ್ಚರ್ಯಚಕಿತರಾದ ಕಲಾಂ ಅವರು ''ಸಂಸ್ಕೃತವನ್ನು ಎಲ್ಲಿ ಕಲಿತಿರಿ?'' ಎಂದು ವಿಚಾರಿಸಿದಾಗ ಅವರು ''ನಮ್ಮ ದೇಶದ ಪ್ರಾಚೀನ ಭಾಷೆಯಾದ ಗ್ರೀಕ್ ಅನ್ನು ಅರ್ಥ ಮಾಡಿಕೊಳ್ಳಲು, ಜರ್ಮನಿಗೆ ಹೋದಾಗ ಮೊದಲು ಸಂಸ್ಕೃತವನ್ನು ಕಲಿತೆ'' ಎಂದು ಉತ್ತರಿಸಿದರಂತೆ.

ಸಂಸ್ಕೃತ, ಜಗತ್ತಿನ ಎಲ್ಲ ಭಾಷೆಗಳಿಗೂ ತಾಯಿಬೇರಿದ್ದಂತೆ ಎನ್ನಲು ಇದಕ್ಕಿಂತ ಬೇರೆ ಉದಾಹರಣೆ ಬೇಕೆ?

ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಲೇಬೇಕಾದ ಸಂಸ್ಕಾರಗಳ ಬಗ್ಗೆ ಸಂಸ್ಕೃತದಲ್ಲಿ ವಿಪುಲವಾದ ಮಾಹಿತಿ ಇದೆ. 'ಸತ್ಯವನ್ನೇ ಹೇಳಬೇಕು, ಧರ್ಮವನ್ನು ಆಚರಿಸಬೇಕು, ಗುರು ಹಿರಿಯರನ್ನು ಗೌರವಿಸಬೇಕು' ಇತ್ಯಾದಿ ಇತ್ಯಾದಿಯಾಗಿ ತಿಳಿಹೇಳುವ ಮಾತುಗಳು ಸಂಸ್ಕೃತ ವಾಙ್ಮಯದಲ್ಲಿ ಹೇರಳವಾಗಿವೆ. ನಮ್ಮ ಶ್ರುತಿ, ಸ್ಮೃತಿ, ಪುರಾಣಗಳು, ಇಂತಹ ಮಾಹಿತಿಯ ಕಣಜಗಳೆಂದರೆ ಅತಿಶಯೋಕ್ತಿಯೇನಲ್ಲ.

**ಅಕೃತ್ವಾ ಪರಸಂತಾಪಂ ಅಗತ್ವಾ ಖಲನಮ್ರತಾಂ।**
**ಅನುತ್ಸೃಜ್ಯ ಸತಾಂ ವರ್ತ್ಮ ಯತ್ಸ್ವಲ್ಪಮಪಿ ತದ್ಬಹು ॥**

—— 'ಬೇರೆಯವರಿಗೆ ನೋವುಂಟು ಮಾಡದೆ, ದುಷ್ಟರಿಗೆ ತಲೆ ಬಾಗದೆ, ಸಜ್ಜನರ ಹಾದಿಯನ್ನು ಬಿಡದೆ, ಕಿಂಚಿತ್ ಸಾಧನೆ ಮಾಡಿದರೂ ಸಾಕು, ಅದೇ ದೊಡ್ಡದು' ಎಂಬಂತಹ ಮಾರ್ಗದರ್ಶಿ ಮಾತುಗಳು ಸಂಸ್ಕೃತದಲ್ಲಿ ಇರುವಷ್ಟು ಬೇರಾವ ಭಾಷೆಯಲ್ಲೂ ಕಾಣಸಿಗುವುದಿಲ್ಲ.

'ಆಚಾರಃ ಪರಮೋ ಧರ್ಮಃ' ಎನ್ನುತ್ತದೆ ಮನುಸ್ಮೃತಿ. ಅಂದರೆ ಸನ್ನಡತೆಯೇ ಶ್ರೇಷ್ಠವಾದ ಧರ್ಮ ಎಂದರ್ಥ. ರಾಗ-ದ್ವೇಷಗಳಿಲ್ಲದ ಸಾಧು-ಸತ್ಪುರುಷರ ಆಚಾರವೇ ಸದಾಚಾರ. ಇಂಥ ಸದಾಚಾರ, ಶೀಲದ ಬಗ್ಗೆ ಮಹಾಭಾರತದಲ್ಲಿ ಒಂದು ಉಲ್ಲೇಖವಿದೆ.

**ಅದ್ರೋಹಃ ಸರ್ವಭೂತಾನಾಂ ಕರ್ಮಣಾ ಮನಸಾ ಗಿರಾ।**
**ಅನುಗ್ರಹಂ ಚ ಜ್ಞಾನಂ ಚ ಶೀಲಮೇತದ್ವಿದುರ್ಬುಧಾಃ ॥**

ಸಕಲ ಜೀವ ರಾಶಿಗಳಲ್ಲೂ ದಯೆ, ಕಾಯಾ-ವಾಚಾ-ಮನಸಾ-ಯಾರನ್ನೂ ದ್ವೇಷಿಸದಿರುವುದು ಹಾಗೂ ಜ್ಞಾನ ಸಂಪಾದನೆಯೇ ಶೀಲ, ಸದಾಚಾರ. ಇದು ಎಲ್ಲ ಕಾಲಕ್ಕೂ, ಎಲ್ಲರೂ ಅನುಸರಿಸಬೇಕಾದ ನಡವಳಿಕೆ. ಇಂಥ ಸಂಸ್ಕೃತಿಯ ಪಾಠಗಳು ನಮ್ಮ ಪುರಾಣ, ಉಪನಿಷತ್ತುಗಳಲ್ಲೂ ಸಾಕು ಬೇಕಾದಷ್ಟಿವೆ.

ದಶೋಪನಿಷತ್ತುಗಳಲ್ಲಿ ಮುಖ್ಯವಾದ ತೈತ್ತಿರೀಯ ಉಪನಿಷತ್ತಿನ ಹನ್ನೊಂದನೆಯ ಅನುವಾಕ ಶೀಕ್ಷಾವಲ್ಲಿ. ಇದನ್ನು ಒಂದರ್ಥದಲ್ಲಿ ಸ್ನಾತಕೋಪದೇಶ ಎಂದರೂ ತಪ್ಪಿಲ್ಲ.

**'ಸ್ವಾಧ್ಯಾಯಾನ್ಮಾ ಪ್ರಮದಃ** - ಅಧ್ಯಯನವನ್ನು ನಿಲ್ಲಿಸಬೇಡ.

**ಧರ್ಮಾನ್ನ ಪ್ರಮದಿತವ್ಯಂ** - ಧರ್ಮವನ್ನು ಬಿಡಬೇಡ.

**ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಂ** -ದೇವ ಪಿತೃ ಕಾರ್ಯಗಳಲ್ಲಿ ಲೋಪವೆಸಗಬೇಡ.

**ಮಾತೃ ದೇವೋ ಭವ** - ತಾಯಿಯನ್ನು ದೇವರಂತೆ ಕಾಣು.

**ಪಿತೃ ದೇವೋ ಭವ** - ತಂದೆಯನ್ನು ದೇವರಂತೆ ಗೌರವಿಸು.

**ಆಚಾರ್ಯ ದೇವೋ ಭವ** - ಗುರುಗಳನ್ನು ದೇವರಂತೆ ಭಾವಿಸು.

**ಅತಿಥಿ ದೇವೋ ಭವ** -ಅತಿಥಿಗಳನ್ನು ದೇವರಂತೆ ಆದರಿಸು.

**ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ, ನೋ ಇತರಾಣಿ** - ಒಳ್ಳೆಯ ಕೆಲಸಗಳನ್ನು ಮಾಡು, ನಿಂದಾರ್ಹವಾದ ಕರ್ಮಗಳನ್ನು ಮಾಡಬೇಡ.

**ಏತದನುಶಾಸನಂ** - ಇದು ಆದೇಶ'.

—— ಹೀಗೆ ಇಲ್ಲಿ ಎಲ್ಲ ಕಾಲಕ್ಕೂ ಸಲ್ಲುವಂಥ ಸಾರ್ವಕಾಲಿಕ ನೀತಿಬೋಧೆ ಮಾಡಲಾಗಿದೆ. ನಮ್ಮ ನಡವಳಿಕೆ ಹೀಗೇ ಇರಬೇಕೆಂಬ ಸಂಸ್ಕಾರ ಪಾಠ ಇದು.

ಈಶಾವಾಸ್ಯ, ಕೇವಲ ೧೮ ಮಂತ್ರಗಳಿರುವ ಉಪನಿಷತ್ತು. ನಾವು ಜೀವನದಲ್ಲಿ ಅಳವಡಿಸಿಕೊಳ್ಳಲೇ ಬೇಕಾದ ತತ್ತ್ವಗಳನ್ನು ಇದು ವಿಶದಪಡಿಸುತ್ತದೆ.

**'ಈಶಾವಾಸ್ಯಮಿದಂ ಸರ್ವಂ'** ಎಂಬುದು ಮೊದಲ ಮಂತ್ರ. ಈ ಲೋಕವೆಲ್ಲಾ ಶಿವಮಯ. ಇಲ್ಲಿ ಇರುವವರೆಲ್ಲಾ ಭಗವತ್ಸ್ವರೂಪರೇ. ಇಲ್ಲಿ ಮೇಲು-ಕೀಳು, ಉಚ್ಚ-ನೀಚ, ಮಿತ್ರ- ಶತ್ರು ಎಂಬ ಭೇದ ಭಾವವಿಲ್ಲ. ಎಲ್ಲರಲ್ಲೂ ಆ ಭಗವಂತನೇ ಇದ್ದಾನೆ.

'ತೇನ ತ್ಯಕ್ತೇನ ಭುಂಜೀಥಾಃ' ತ್ಯಾಗಪೂರ್ವಕವಾಗಿ ಸಂಪತ್ತನ್ನು ಅನುಭವಿಸಬೇಕು. ನಮಗೆ ಅಗತ್ಯವಾಗಿದ್ದಕ್ಕಿಂತ ಹೆಚ್ಚು

ಸಂಗ್ರಹಿಸುವುದು ಕಳ್ಳತನದಂತೆಯೇ ಸರಿ. ಭೋಗ, ತ್ಯಾಗ ಪೂರ್ವಕವಾಗಿರಬೇಕು. ಉಳ್ಳವರು, ಇಲ್ಲದವರಿಗೆ ನೀಡಬೇಕು ಎನ್ನುತ್ತದೆ ಅದು. ಇದು, ಇಂದು ಹಿಂದೆಂದಿಗಿಂತಲೂ ಹೆಚ್ಚು ಪ್ರಸ್ತುತವೆನಿಸುವ ಸಂಸ್ಕಾರವಲ್ಲವೆ? ಇದು ನಿಜಕ್ಕೂ ಪ್ರತಿಯೊಬ್ಬರೂ ಅನುಸರಿಸಲೇಬೇಕಾದ ಜೀವನ ವಿಧಾನ.

**'ಮಾ ಗೃಧಃ ಕಸ್ಯ ಸ್ವಿದ್ಧನಂ'** – ದುರಾಸೆ ಪಡಬೇಡ, ಮತ್ತೊಬ್ಬರ ಹಣಕ್ಕೆ ಆಸೆ ಪಡಬೇಡ. ಈ ಲೋಕದಲ್ಲಿ ಎಲ್ಲವೂ ಇದೆ. ಆದರೆ ದುರಾಸೆಯನ್ನು ತಣಿಸುವಂಥ ನಿಧಿ ಮಾತ್ರ ಇಲ್ಲ. ದುರಾಸೆ, ಸರ್ವನಾಶಕ್ಕೆ ಮೂಲ. ಹಣದ ವಿಷಯದಲ್ಲಿ ಅಧಿಕಾರ, ಮಮಕಾರ ಸಲ್ಲದು.

**'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ'** ನಮ್ಮ ನಮ್ಮ ಕೆಲಸಗಳನ್ನು ಮಾಡುತ್ತಾ ನೂರ್ಕಾಲ ಬಾಳೋಣ ಎಂದು ಅಲ್ಲಿ ಸಾರಿ ಹೇಳಲಾಗಿದೆ.

ಹೀಗೆ ಸಂಸ್ಕೃತ ಸಾಹಿತ್ಯದಲ್ಲಿ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವಂಥ ನೀತಿಗಳು ವಿಪುಲವಾಗಿವೆ. ನಮ್ಮ ಶ್ರುತಿ, ಸ್ಮೃತಿಗಳು ಧಾರಾಳವಾಗಿ ಸಂಸ್ಕಾರ ಪಾಠಗಳನ್ನು ಹೇಳಿವೆ. ಅವನ್ನು ಗ್ರಹಿಸಿ, ಅನುಸರಿಸಬೇಕಾದ್ದು ನಮ್ಮ ಕರ್ತವ್ಯ. ನಮ್ಮ ದೈನಂದಿನ ಬದುಕಿಗೆ ಅಗತ್ಯವಾದ ಪ್ರತಿಯೊಂದು ಅಂಶವೂ ಸಂಸ್ಕೃತದಲ್ಲಿದೆ. ಆದ್ದರಿಂದಲೇ ಉತ್ತರಾಖಂಡ ರಾಜ್ಯವು ಸಂಸ್ಕೃತವನ್ನು ತನ್ನ ಆಡಳಿತದ ಎರಡನೆಯ ಭಾಷೆಯಾಗಿ ಅಂಗೀಕರಿಸಿರುವುದು.

ವಿಭಿನ್ನತೆಯಲ್ಲಿ ಏಕತೆಯನ್ನು ಸಾಧಿಸುವ ಶಕ್ತಿ ಸಂಸ್ಕೃತಕ್ಕಿದೆ. ಬೇರೆ ಬೇರೆ ಭಾಷೆಗಳನ್ನಾಡುವ, ಬೇರೆ ಬೇರೆ ಆಚಾರ-ವಿಚಾರಗಳಿರುವ ರಾಜ್ಯಗಳನ್ನೆಲ್ಲಾ ಒಂದು ರಾಷ್ಟ್ರದ ಏಕಸೂತ್ರದಲ್ಲಿ ಬೆಸೆದಿರುವುದು ಭಾರತೀಯ ಸಂಸ್ಕೃತಿ. ಆ ಸಂಸ್ಕೃತಿಯ ತಾಯಿಬೇರು ಸಂಸ್ಕೃತ.

'ಅಹಿಂಸಾ ಪರಮೋ ಧರ್ಮಃ'– ಅಹಿಂಸೆಯೇ ಶ್ರೇಷ್ಠವಾದ ಧರ್ಮ. 'ಸತ್ಯಮೇವ ಜಯತೇ, ನಾನೃತಂ'–ಸತ್ಯಕ್ಕೆ ಮಾತ್ರವೇ ಜಯ, ಸುಳ್ಳಿಗಲ್ಲ. 'ಉದಾರಚರಿತಾನಾಂ ತು ವಸುಧೈವ ಕುಟುಂಬಕಂ'– 'ಉದಾರ ಮನಸ್ಸಿದ್ದವರಿಗೆ ಇಡೀ ವಿಶ್ವವೇ ಒಂದು ಕುಟುಂಬವಿದ್ದಂತೆ'– ಹೀಗೆ ದಿನನಿತ್ಯದ ಜೀವನಕ್ಕೆ ಅತ್ಯಗತ್ಯವಾದ ಸಾಂಸ್ಕೃತಿಕ ಮೌಲ್ಯಗಳನ್ನು ಸಂಸ್ಕೃತ ಸಾಹಿತ್ಯ ಬಗೆಬಗೆಯಾಗಿ ಹೇಳುತ್ತದೆ. ಅವನ್ನೆಲ್ಲಾ ಓದಿ ಸುಮ್ಮನಾಗದೆ, ಕಿಂಚಿತ್ತಾದರೂ ಆಚರಣೆಗೆ ತಂದರೆ ನಮ್ಮ ಜೀವನ ಸಾರ್ಥಕವಾಗುತ್ತದೆ. ❋


## ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ (RIMSE)

**ಯಾದವಗಿರಿ, ಮೈಸೂರು – 570 020**

# ಆಧ್ಯಾತ್ಮಿಕ ಶಿಬಿರ (ಪುರುಷರಿಗಾಗಿ ಆವಾಸಿ ಶಿಬಿರ)

**29 ಜೂನ್ 2022 ರಿಂದ 03 ಜುಲೈ 2022 : ಐದು ದಿನಗಳ ಆಧ್ಯಾತ್ಮಿಕ ಶಿಬಿರ**

ಮಾಧ್ಯಮ: **ಕನ್ನಡ ಮತ್ತು ಇಂಗ್ಲಿಷ್**



**ಸೂಚನೆಗಳು**

* ಶುಲ್ಕ: ರೂ 3,000 ಮಾತ್ರ – ಊಟ ಹಾಗೂ ವಸತಿ ಸೌಲಭ್ಯ ಸೇರಿ.
* ಶಿಬಿರದಲ್ಲಿ ಭಾಗವಹಿಸಲು ಮೊದಲು ಸ್ವೀಕರಿಸಿದ ಅರ್ಜಿಗಳಿಗೆ ಆದ್ಯತೆ ಇರುತ್ತದೆ.
* ತುಂಬಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 20 ಜೂನ್ 2022.
* ಶಿಬಿರಾರ್ಥಿಗಳು 29-06-2022 ರಂದು ಸಂಜೆ 5 ಗಂಟೆಯ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರಬೇಕು.
* ಆಧ್ಯಾತ್ಮಿಕ ಶಿಬಿರದಲ್ಲಿ ಭಾಗವಹಿಸುವ ಭಕ್ತರು ಉತ್ತಮ ಆರೋಗ್ಯವನ್ನು ಹೊಂದಿರಬೇಕು.
* ಶಿಬಿರದ ಸಮಯದಲ್ಲಿ ಆಶ್ರಮದ ನೀತಿ-ನಿಯಮಗಳನ್ನು ಪಾಲಿಸುತ್ತ ಆಶ್ರಮದ ಆಧ್ಯಾತ್ಮಿಕ ವಾತಾವರಣಕ್ಕೆ ಧಕ್ಕೆಯಾಗದಂತೆ ನಡೆದುಕೊಳ್ಳಬೇಕು. ಆಶ್ರಮದಲ್ಲಿ ಸಮಯಪ್ರಜ್ಞೆ / ಶಿಸ್ತಿಗೆ ಬಹಳ ಪ್ರಾಮುಖ್ಯತೆಯನ್ನು ನೀಡಲಾಗುವುದು.
* ಶಿಬಿರದ ಎಲ್ಲ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು.
* ಶಿಬಿರದ ವಿವರಗಳನ್ನೊಳಗೊಂಡ ಅರ್ಜಿಗಾಗಿ ಸ್ವ – ವಿಳಾಸವಿರುವ (10cmx23cm) ಲಕೋಟೆಗೆ ರೂ.5/- ಅಂಚೆ ಚೀಟಿಯನ್ನು ಲಗತ್ತಿಸಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ:

**ವಿಳಾಸ:** Correspondent, Ramakrishna Institute of Moral and Spiritual Education (RIMSE)
Yadavagiri, Mysuru - 570020 Phone: 0821 – 2417666 / 2412800 Mob No 8861117757
E-mail: mysuru.rimse@rkmm.org Website: www.rimse.org.in